# ನಗುವಿನೊಡೆಯನ ರನ್ ಕಥನ



ಕೆಲವು ತಿಂಗಳಾದವಷ್ಟೆ. ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಾಕಿಸ್ತಾನದ ವಿರುದ್ಧ ವಿಶ್ವಕಪ್ ಏಕದಿನ ಪಂದ್ಯದಲ್ಲಿ ಆಸ್ಟ್ರೇಲಿಯಾ 62 ರನ್‌ಗಳ ವಿಜಯ ಸಾಧಿಸಿ. ಆ ಪಂದ್ಯದಲ್ಲಿ ಡೇವಿಡ್ ವಾರ್ನರ್, ಮಿಚೆಲ್ ಮಾರ್ಷ್ ಇಬ್ಬರೂ ಆಸ್ಟ್ರೇಲಿಯಾ ಪರವಾಗಿ ಶತಕ ಹೊಡೆದಿದ್ದರು. ಮೊದಲ ವಿಕೆಟ್‌ಗೆ 259 ರನ್‌ಗಳ ಭರ್ಜರಿ ಜೊತೆಯಾಟ ಆಡಿದ್ದರು. 124 ಎಸೆತಗಳಲ್ಲಿ ವಾರ್ನರ್ ಆ ದಿನ ಗಳಿಸಿದ 163 ರನ್‌ಗಳು ಕಣ್ಣಿಗೆ ಕಟ್ಟಿವೆ. ಮೈದಾನದ ತುಂಬಾ ಅವರು ಪಾದರಸದಂತೆ ಓಡಾಡುತ್ತಾ, ಮುಖದಗಲ ನಗುವ ಪರಿ ಆಟದ ಸುಖವುಣ್ಣುವ ಯಾರಿಗೇ ಆಗಲಿ ಸಂತಸ ನೀಡುವುದು ಖರೆ.

ಹೀಗಿರುವ ವಾರ್ನರ್ ಇನ್ನು ಏಕದಿನ ಹಾಗೂ ಟೆಸ್ಟ್ ಕ್ರಿಕೆಟ್ ಪಂದ್ಯಗಳನ್ನು ಆಡುವುದಿಲ್ಲ. ಇನ್ನೇನಿದ್ದರೂ ಚುಟುಕು ಕ್ರಿಕೆಟ್ ಆಡುವಾಗಲಷ್ಟೇ ಅವರ ಆ 'ಸಿಗ್ನೇಚರ್ ಸ್ಟೈಲ್' ಅನ್ನು ನಾವು ನೋಡಬಹುದು.

ಮೂವತ್ತೇಳು ವರ್ಷ ವಯಸ್ಸಿನ ವಾರ್ನರ್ ಮುಖದ ಮೇಲೆ ಸುಕ್ಕುಗಳೇನೋ ಢಾಳಾಗಿವೆ. ಆದರೆ, ಅವರು ಗಟ್ಟಿಯಾಗಿ ಹಿಡಿದ ಬ್ಯಾಟ್‌ನ ಚಲನೆಯಲ್ಲಿ ಮುಪ್ಪು ಕಾಣಿಸದು. ತಮ್ಮ ಕೊನೆಯ ಟೆಸ್ಟ್ ಪಂದ್ಯದ ಒಂದು ಇನಿಂಗ್ಸ್‌ನಲ್ಲಿ 34 ರನ್‌ಗಳನ್ನು ಅವರು ಪಾಕಿಸ್ತಾನದ ವಿರುದ್ಧ ಗಳಿಸಿ, ಪೆವಿಲಿಯನ್‌ನತ್ತ ಹೆಜ್ಜೆ ಹಾಕಿದಾಗ ಕ್ರೀಡಾಂಗಣದಲ್ಲಿ ನೆರೆದಿದ್ದವರು ಎದ್ದುನಿಂತು ಕರತಾಡನ ಮಾಡಿದರು.

ಇದಕ್ಕೂ ಕೆಲವೇ ದಿನಗಳ ಮೊದಲು ಆಸ್ಟ್ರೇಲಿಯಾದ ಮಿಚೆಲ್ ಜಾನ್ಸನ್, 'ಬಾಲ್ ಟ್ಯಾಂಪರ್ ಮಾಡಿದ ವ್ಯಕ್ತಿಗೆ ವಿದಾಯದ ಗೌರವ ಕೊಡಬೇಕೆ' ಎಂದು ಟೀಕಿಸಿದ್ದರು. ಬಾಲ್ಯದಿಂದಲೇ ಡೇವಿಡ್ ವಾರ್ನರ್ ಅವರನ್ನು ನೋಡುತ್ತಾ, ಅವರ ಜೊತೆ ಆಡಿಕೊಂಡು ಬಂದಿರುವ ಉಸ್ಮಾನ್ ಖವಾಜ ಆಗ ತಮ್ಮ ಕ್ರಿಕೆಟ್ ಸಹಪಾಠಿಯ ಬೆಂಬಲಕ್ಕೆ ನಿಂತರು. ವಾರ್ನರ್ ಯಾವತ್ತೂ ತಂಡವನ್ನು ಮುಂದಕ್ಕೆ ಬಿಟ್ಟು, ತಾವು ಹಿಂದೆ ನಿಲ್ಲುತ್ತಿದ್ದರು ಎಂಬ ವಿಷಯಕ್ಕೆ ಅಡಿಗೆರೆ ಎಳೆದರು. ಅದನ್ನು ಸಮರ್ಥಿಸಲು ತಮ್ಮದೇ ಅನುಭವ ಕಥನಗಳನ್ನೂ ಅವರು ಉದಾಹರಣೆಯಾಗಿ ಕೊಟ್ಟರು.

**ಎನ್ವಿ**

ಬಾಲ್ ಟ್ಯಾಂಪರಿಂಗ್ ಪ್ರಕರಣದ ಕಾರಣಕ್ಕೆ ವಾರ್ನ್ 2018ರಿಂದ ಒಂದು ವರ್ಷ ನಿಷೇಧಕ್ಕೆ ಒಳಗಾಗಿದ್ದರು. ಶಿಕ್ಷೆ ಅನುಭವಿಸಿದ ನಂತರ ಮರುಪ್ರವೇಶ ಮಾಡಿದ ಮೇಲೆ ಅವರ ಆಟದ ವೈಖರಿ ಇನ್ನಷ್ಟು ಬದಲಾಯಿತು. ಅದಕ್ಕೆ ಒಂದು ಉದಾಹರಣೆ: 2019ರ ವಿಶ್ವಕಪ್‌ನ ಮೊದಲ ಪಂದ್ಯದಲ್ಲೇ ಅಫ್ಘಾನಿಸ್ತಾನದ ವಿರುದ್ಧ ಔಟಾಗದೆ 89 ರನ್ ಗಳಿಸಿ, ಪಂದ್ಯ ಪುರುಷೋತ್ತಮ ಪ್ರಶಸ್ತಿಗೆ ಭಾಜನರಾದರು.

ಸಿಡ್ನಿಯ ಪ್ಯಾಡಿಂಗ್ಟನ್‌ನಲ್ಲಿ ಹುಟ್ಟಿದ ಡೇವಿಡ್ ವಾರ್ನರ್ ಹದಿಮೂರನೇ ವಯಸ್ಸಿನಲ್ಲಿಯೇ ಚೆಂಡನ್ನು ಮೇಲಕ್ಕೆತ್ತಿ ಹೊಡೆಯುವ ಚಾಳಿ ತೋರಿಸಿದ್ದರು. ಅದನ್ನು ಕಂಡ ಕೋಚ್, ಬಲಗೈ ಬ್ಯಾಟ್ಸ್‌ಮನ್ ಆಗು ಎಂದು ಒತ್ತಡ ಹೇರಿದ್ದರು. ಮಗ ಸಹಜವಾಗಿಯೇ ಎಡಗೈನಲ್ಲಿ ಆಡಬೇಕು ಎಂದು ತಾಯಿ ಲಾರೇನ್ ಹಟ ಹಿಡಿದಿದ್ದರ ಫಲವೇ, ಹದಿನೈದು ವರ್ಷದ ಪ್ರಾಯದಲ್ಲೇ ವಾರ್ನರ್ ಸಿಡ್ನಿ ಕೋಸ್ಟಲ್ ಕ್ರಿಕೆಟ್ ಕ್ಲಬ್ ಪರವಾಗಿ 16 ವರ್ಷದೊಳಗಿನವರ ಕ್ರಿಕೆಟ್‌ನಲ್ಲಿ ರನ್ ಗಳಿಕೆಯ ದಾಖಲೆ ನಿರ್ಮಿಸಿದ್ದು.

ಒಟ್ಟು 110 ಟೆಸ್ಟ್‌ಗಳಲ್ಲಿ 44.82ರ ಸರಾಸರಿಯಲ್ಲಿ 8,651 ರನ್‌ಗಳನ್ನು ವಾರ್ನರ್ ಕಲೆಹಾಕಿದ್ದಾರೆ. 26 ಶತಕ, 36 ಅರ್ಧಶತಕಗಳು ಅವರ ದಾಳಿಕೋರತನಕ್ಕೆ ಕನ್ನಡಿ ಹಿಡಿಯುತ್ತವೆ. 161 ಏಕದಿನ ಪಂದ್ಯಗಳಲ್ಲಿ 6,932 ರನ್‌ಗಳನ್ನು ಜಮೆ ಮಾಡಿದ್ದೂ 45.30 ಸರಾಸರಿಯಲ್ಲಿ. 22 ಶತಕ, 33 ಅರ್ಧಶತಕಗಳನ್ನು ಈ ಮಾದರಿಯ ಕ್ರಿಕೆಟ್‌ನಲ್ಲೂ ಅವರು ದಾಖಲಿಸಿದ್ದಾರೆ. ವಿಶ್ವಕಪ್ ಪಂದ್ಯಗಳಲ್ಲಿ ಆರು ಶತಕಗಳು ಅವರ ಬ್ಯಾಟ್‌ನಿಂದ ಬಂದಿವೆ ಎನ್ನುವುದು ಆಸ್ಟ್ರೇಲಿಯಾ ತಂಡಕ್ಕೆ ಅವರ ಕಾಣಿಕೆಯ ಪ್ರಮಾಣ ಎಷ್ಟೆಂಬುದನ್ನು ಪುಷ್ಟೀಕರಿಸುತ್ತದೆ.

ದಾಖಲೆಗಳ ಪುಟಗಳ ಮೇಲೆ ಕಣ್ಣಾಡಿಸಿದರೆ ವಾರ್ನರ್ ಹೆಸರು ಪದೇಪದೇ ಕಾಣುತ್ತದೆ. ಪ್ರಥಮ ದರ್ಜೆ ಕ್ರಿಕೆಟ್‌ನ ಅನುಭವವೇ ಇಲ್ಲದಿದ್ದರೂ ರಾಷ್ಟ್ರೀಯ ತಂಡಕ್ಕೆ ಆಸ್ಟ್ರೇಲಿಯಾದಲ್ಲಿ ಆಯ್ಕೆಯಾದ ಮೊದಲ ಕ್ರಿಕೆಟಿಗ ಇವರು. ಒಂದೇ ವರ್ಷದಲ್ಲಿ ಏಕದಿನ ಪಂದ್ಯಗಳಲ್ಲಿ ಏಳು ಶತಕಗಳನ್ನು ಹೊಡೆದ ಆಸ್ಟ್ರೇಲಿಯಾದ ಮೊದಲ ಬ್ಯಾಟ್ಸ್‌ಮನ್ ಕೂಡ ಇವರೇ. 2015ರಲ್ಲಿ ಒಂದೇ ಟೆಸ್ಟ್‌ನ ಎರಡು ಇನಿಂಗ್ಸ್‌ಗಳಲ್ಲಿ ಅವರು ಶತಕಗಳನ್ನು ಗಳಿಸಿದಾಗ, ಅಂತಹ ಸಾಧನೆಯನ್ನು ಮೂರು ಸಲ ಮಾಡಿದ ವಿಶ್ವದ ಮೂರನೇ ಬ್ಯಾಟ್ಸ್‌ಮನ್ ಎಂಬ ಗೌರವ ಅವರದ್ದಾಯಿತು. ಸುನಿಲ್ ಗಾವಸ್ಕರ್ ಹಾಗೂ ರಿಕಿ ಪಾಂಟಿಂಗ್ ಮಾತ್ರ ಟೆಸ್ಟ್ ಪಂದ್ಯದ ಎರಡೂ ಇನಿಂಗ್ಸ್‌ಗಳಲ್ಲಿ ಶತಕಗಳನ್ನು ಮೂರು ಸಲ ಗಳಿಸಿದ್ದಾರೆ. ಮೂರು ಏಕದಿನ ಪಂದ್ಯಗಳಲ್ಲಿ ತಂಡದ ನಾಯಕನಾಗುವ ಹೊಣೆ ಅವರಿಗೆ ಸಿಕ್ಕಿತ್ತು. ಆ ಮೂರೂ ಪಂದ್ಯಗಳನ್ನು ಅವರು ಗೆಲ್ಲಿಸಿಕೊಟ್ಟಿದ್ದರು.

ವಾರ್ನರ್ ಅಸಾಂಪ್ರದಾಯಿಕ ಹೊಡೆತಗಳಿಂದ ಗುರುತು ಮೂಡಿಸಿದವರು. ಬಲಗೈ ಬ್ಯಾಟ್ಸ್‌ಮನ್ ರೀತಿ ಚಕ್ಕನೆ ತಿರುಗಿ ಹೊಡೆಯುವ ಸ್ವಿಚ್ ಶಾಟ್, ಚೆಂಡಿನ 'ಏರಿಯಲ್ ರೂಟ್' ಅನ್ನು ಸೂಕ್ಷ್ಮವಾಗಿ ಬಳಸಿಕೊಂಡು ಮೇಲಕ್ಕೆತ್ತಿ ಹೊಡೆಯುವ ಶಾಟ್‌ಗಳು ಇದಕ್ಕೆ ಉದಾಹರಣೆಗಳು. ಆಫ್‌ಸೈಡ್‌ನಲ್ಲೇ ಹೆಚ್ಚು ರನ್ ಗಳಿಸುವ ಇವರು, ಆ ಭಾಗದಲ್ಲಿ ನಿಂತ ಹಲವು ಫೀಲ್ಡರ್‌ಗಳ ನಡುವಿನ 'ಗ್ಯಾಪ್'ನಲ್ಲಿ ಆಡುತ್ತಿದ್ದ ವೈಖರಿ ಹೊಸ ಆಟಗಾರರಿಗೆ ಪ್ರಾತ್ಯಕ್ಷಿಕೆಯಂತೂ ಹೌದು. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65